ಸದನದಲ್ಲಿ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 09ನೇ ಮಾರ್ಚ್, 2020

**ಮಾನ್ಯ ಸದಸ್ಯರು ಹಿಂದಕ್ಕೆ ಪಡೆದಿರುತ್ತಾರೆ**

ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಲ್ಲಿ 2011-12, 2012-13 ಮತ್ತು 2013-14ನೇ ಸಾಲಿನ ಮಾಹಿತಿ ಬಗ್ಗೆ

ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ)

74 (423) ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮುಕ್ತ ಗಂಗೋತ್ರಿ ಮೈಸೂರು ಇಲ್ಲಿ 2011-12, 2012-13 ಮತ್ತು 2013-14ನೇ ಸಾಲುಗಳಲ್ಲಿ ಕಲಾವಿಭಾಗ (ಃಚಿಛಿheಟಂಡಿ oಜಿ ಂಡಿಣs) ದಲ್ಲಿ ಪರೀಕ್ಷೆ ತೆಗೆದುಕೊಂಡಿರುವ ಅಭ್ಯರ್ಥಿಗಳ ಹೆಸರು, ವಿಳಾಸ ಮತ್ತು ನೋಂದಣಿ ಸಂಖ್ಯೆವಾರು ವಿವರಗಳನ್ನು ನೀಡುವುದು;

(ಆ) ಸದರಿ ಶೈಕ್ಷಣಿಕ ವರ್ಷಗಳಲ್ಲಿ ಕಲಾ ವಿಭಾಗದ ಪರೀಕ್ಷೆಗಳಲ್ಲಿ ಹಾಜರಾಗಿರುವವರ, ತೇರ್ಗಡೆ ಹೊಂದಿರುವ ಮತ್ತು ಅನುತ್ತೀರ್ಣರಾಗಿರುವ ಅಭ್ಯರ್ಥಿಗಳ ಹೆಸರು, ವಿಳಾಸ ಮತ್ತು ನೋಂದಣಿ ಸಂಖ್ಯೆವಾರು ವಿವರ ನೀಡುವುದು ; (ಆಂತರಿಕ ಅಂಕ iಟಿಣeಡಿಟಿಚಿಟ mಚಿಡಿಞs ಒಳಗೊಂಡಂತೆ)

(ಇ) ಸದರಿ ಶೈಕ್ಷಣಿಕ ವರ್ಷಗಳಲ್ಲಿ ಕಲಾವಿಭಾಗದ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷಗಳನ್ನು ಪೂರೈಸಿ ಪದವಿ ಪೂರೈಸಿರುವ ಅಭ್ಯರ್ಥಿಗಳ ಹೆಸರುವಾರು ವಿವರ ನೀಡುವುದು ;

(ಈ) ಈ ವಿಶ್ವವಿದ್ಯಾಲಯದಿಂದ ಸದರಿ ಸಾಲಿನಲ್ಲಿ ಪಡೆದಿರುವ ಪದವಿಗಳಿಗೆ ಮಾನ್ಯತೆ ನೀಡುವ ವಿಚಾರಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದರೂ, ವಿವಿಧ ಇಲಾಖೆಗಳಲ್ಲಿ ಬಡ್ತಿ ಪಡೆದುಕೊಳ್ಳುವ ಸಲುವಾಗಿ ನೈಜತೆ ಪ್ರಮಾಣ ಪತ್ರ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಎಷ್ಟು ಜನರಿಗೆ ಈ ರೀತಿಯ ನೈಜತೆ ಪ್ರಮಾಣ ಪತ್ರ ನೀಡಲಾಗಿದೆ ; (ಹೆಸರು ಸಹಿತ ವಿವರ ನೀಡುವುದು)

(ಉ) ನೈಜತೆ ಪ್ರಮಾಣ ಪತ್ರ ನೀಡುವಾಗ ಆಂತರಿಕ ಅಂಕಗಳಲ್ಲಿ ವ್ಯತ್ಯಾಸವಿದ್ದರೂ ಸಹ ನೈಜತೆ ನೀಡಿರುವ ಕುರಿತು ದೂರುಗಳು ಬಂದಿದೆಯೇ ; ಎಷ್ಟು ಅಭ್ಯರ್ಥಿಗಳಿಗೆ ಈ ರೀತಿ ನೀಡಲಾಗಿದೆ ; ಹಾಗಿದ್ದಲ್ಲಿ, ಈ ಕುರಿತು ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)